ದಿ:.09.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು 1 ಮತ್ತು 2 ನೇ ಎದುರುದಾರರ ಪರ ಶ್ರೀ ವಕೀಲರಿಂದ</u>

1) ದಿನಾಂಕ 10.07.2024 ರಂದು ಮುಂಜಾನೆ 8 ಗಂಟೆ ಸಮಯದಲ್ಲಿ ಮೂಡಿಗೆರೆ ಹ್ಯಾಂಡ್ ಪೋಸ್ಟ ಬಳಿ ಅಪಘಾತ ಆಗಿತ್ತು ಎಂದರೆ ಸರಿ. ಮೂಡಿಗೆರೆ ಪಿ.ಎಚ್.ಸಿ ಯಲ್ಲಿ ಅರ್ಜಿದಾರ ಚಿಕಿತ್ಸೆ ಪಡೆದಿದ್ದ ಎಂದರೆ ಸರಿ. ಸದರಿ ಸಂಗತಿ ನನ್ನ ಗಮನದಲ್ಲಿ ಇದೆ ಎಂದರೆ ಸರಿ. ಆ ದಿವಸ ಎಮ್.ಎಲ್.ಸಿ ಆಗಿತ್ತು ಇಲ್ಲವೋ ನನಗೆ ಗೊತ್ತಿಲ್ಲ. ಕ್ರೇನ್ ನ ಮಾಲೀಕರು ಗಾಯಾಳುವನ್ನು ವೆನಲಾಕ್ ಆಸ್ಪತ್ರೆ ಮಂಗಳೂರಿಗೆ ಆತನನ್ನು ದಾಖಲಿಸಿದ್ದರು ಎಂದರೆ ಸರಿ. ಸಾಮಾನ್ಯವಾಗಿ ಅಪಘಾತ ಆದಲ್ಲಿ ಎಮ್.ಎಲ್.ಸಿ ಕೇಸ್ ರಿಜಿಸ್ಟರ್ ಮಾಡಿಕೊಳ್ಳುತ್ತಾರೆ ಎಂದರೆ ಸರಿ. ಎಮ್.ಎಲ್.ಸಿ ಕೇಸ್ ರಿಜಿಸ್ಟರ್ ಆದ ಬಗ್ಗೆ ನಾನು ಯಾವುದೇ ದಾಖಲೆಯನ್ನು ನೋಡಿಲ್ಲ. ಆಸ್ಪತ್ರೆಯಲ್ಲಿ ಅದರ ಬಗ್ಗೆ ಕೇಳಿ ತಿಳಿದುಕೊಂಡಿದ್ದೇನೆ.

2) ದಿನಾಂಕ 13.07.2024 ರಂದು ಬಳ್ಳಾರಿ ಟ್ರಾಮಾ ಸೆಂಟರ್ ನಲ್ಲಿ ಎಮ್.ಎಲ್.ಸಿ ಆದ ಬಗ್ಗೆ ನಾನು ಕೇಳಿ ತಿಳಿದುಕೊಂಡಿಲ್ಲ. ಆದರೆ ಡಿಸ್ಚಾರ್ಜ ಸಮ್ಮರಿ ನೋಡಿದ್ದೇನೆ. ದಿನಾಂಕ 10.07.2024 ರಿಂದ 15.07.2024 ರವರೆಗೆ ಯಾವುದಾದರು ಪ್ರಕರಣ ದಾಖಲಾದ ಬಗ್ಗೆ ನನಗೆ ಗೊತ್ತಿಲ್ಲ. ಅಪಘಾತ ಆಗಿ ಹತ್ತು ದಿವಸಗಳ ನಂತರ ಗಾಯಾಳು ನನ್ನ ಬಳಿ ಚಿಕಿತ್ಸೆಗೆ ಬಂದಿದ್ದ. ಟ್ರಾಮಾ ಕೇರ್ ಸೆಂಟರ್ ನವರು ಗಾಯಾಳುವನ್ನು ಹೆಚ್ಚಿನ ಚಿಕಿತ್ಸೆಗೆ ಕಳುಹಿಸಿಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ಆಸ್ಪತ್ರೆಯಲ್ಲಿ ಎಮ್.ಎಲ್.ಸಿ ರಿಜಿಸ್ಟರ್ ಮಾಡಿಲ್ಲ. ಅರ್ಜಿದಾರ ನನ್ನ ಬಳಿ ಚಿಕಿತ್ಸೆಗೆ ಬಂದಾಗ ನಾರ್ಮಲ್ ಆಗಿ ಇದ್ದ ಎಂದರೆ ಸರಿಯಲ್ಲ.

3) ದಿನಾಂಕ 10.07.2024 ರಿಂದ 20.07.2024 ರವರೆಗೆ ಯಾವುದಾದರು ದುರ್ಘಟನೆ ನಡೆದಿರುವ ಸಾಧ್ಯತೆ ಇದೆ ಎಂದರೆ ನನಗೆ ಗೊತ್ತಿಲ್ಲ. ನಾನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಯಿಂದ ನೀಡಿದ ಮೃತನ ಗಾಯಾದ ಪ್ರಮಾಣ ಪತ್ರ ನೋಡಿಲ್ಲ. ನಿಪಿ-9 ರಲ್ಲಿ ಗಾಯ ನಂಬರ್ 1 ರಿಂದ 3 ಸಾದಾ ಸ್ವರೂಪದ ಗಾಯ ಆಗಿದೆ ಎಂದು ನಮೂದಿದೆ ಎಂದರೆ ಸರಿ. ಸಾಕ್ಷಿಯು ಫೀಮರ್ ಮೂಳೆ

ಮುರಿತ ಆಗಿರುವ ಬಗ್ಗೆ ಸಹ ಅದರಲ್ಲಿ ನಮೂದಿದೆ ಎಂದು ಹೇಳಿರುತ್ತಾರೆ. ಸಾಕ್ಷಿ ಮೂಡಿಗೆರೆ ಆಸ್ಪತ್ರೆಯಲ್ಲಿ ಎಕ್ಸರೇ ಮಾಡಿಲ್ಲವೆಂದು ಮತ್ತು ಮದರ್ ಆಸ್ಪತ್ರೆ ಬಳ್ಳಾರಿಯಲ್ಲಿ ಮಾಡಿದ ಎಕ್ಸರೇ ಆಧಾರದ ಮೇಲೆ ನಿಪಿ-9 ರಲ್ಲಿ ಮೂಳೆ ಮುರಿತದ ಗಾಯದ ಬಗ್ಗೆ ನಮೂದಿದೆ ಎಂದು ಹೇಳಿರುತ್ತಾರೆ. ಗಾಯಾಳುವನ್ನು ಪರೀಕ್ಷಿಸುವುದಕ್ಕಿಂತ 6 ಗಂಟೆಯ ಒಳಗೆ ಗಾಯಗಳು ಆಗಿರಬಹುದು ಎಂದು ನಿಪಿ-9 ರಲ್ಲಿ ನಮೂದಿದೆ ಎಂದರೆ ಸರಿ. ಅರ್ಜಿದಾರನಿಗೆ ನಾನು ಹೇಳಿದಂತೆ 1/3 ರ ಮೂಳೆ ಮುರಿತ ಆಗಿಲ್ಲ ಎಂದರೆ ಸರಿಯಲ್ಲ. ಗಾಯಾಳುವಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಮೆಡಿಕಲ್ ದಾಖಲೆಗಳನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

4) ದಿನಾಂಕ 10.07.2024 ರಂದು ನಾನು ಹೇಳಿದಂತೆ ಯಾವುದೇ ಮೂಳೆ ಮುರಿತದ ಗಾಯ ಅರ್ಜಿದಾರನಿಗೆ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾನು ಮೆಡಿಕಲ್ ಗೈಡ್ ಲೈನ್ಸ ಪ್ರಕಾರ ಡಿಸೆಬಲಿಟಿ ಪ್ರಮಾಣ ಪತ್ರ ನೀಡಿಲ್ಲ ಎಂದರೆ ಸರಿಯಲ್ಲ ಡಿಸೆಬಲಿಟಿ ಪ್ರಮಾಣ ಪತ್ರದಲ್ಲಿ ಅರ್ಜಿದಾರನ ವಯಸ್ಸನ್ನು 39 ವರ್ಷ ಎಂದು ತಪ್ಪಾಗಿ ನಮೂದಿಸಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರನಿಗೆ 49 ವರ್ಷ ವಯಸ್ಸಾಗಿತ್ತು ಎಂದರೆ ಅರ್ಜಿದಾರ ಹೇಳಿದಂತೆ ಆತನ ವಯಸ್ಸನ್ನು ನಮೂದು ಮಾಡಿರುತ್ತೇನೆ ಎಂದು ಹೇಳಿರುತ್ತಾರೆ.

5) ಸಾಕ್ಷಿಗೆ ನಿಪಿ-13 ಮತ್ತು 14 ರಲ್ಲಿ ಜಿ.ಎಸ್.ಟಿ ನಮೂದಿಸಿಲ್ಲ ಎಂದರೆ ಸಾಕ್ಷಿಯು ಮೆಡಿಕಲ್ ಬಿಲ್ಲಿಗೆ ಜಿ.ಎಸ್.ಟಿ ಬರುವುದಿಲ್ಲ ಎಂದು ಹೇಳಿರುತ್ತಾರೆ. ನಿಪಿ-13 ರಿಂದ 18 ದಾಖಲೆಗಳನ್ನು ಅರ್ಜಿದಾರನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸೃಷ್ಟಿ ಮಾಡಿ ನೀಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-12 ರಲ್ಲಿ ಅರ್ಜಿದಾರನಿಗೆ ಶೇ 75 ರಷ್ಟು ಅಂಗ ನ್ಯೂನ್ಯತೆ ಉಂಟಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೂರ್ತಿ ದೇಹದ ಡಿಸೆಬಲಿಟಿ ಶೇ75 ರಷ್ಟು ಆಗಿದೆ ಎಂದು ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ನಿಪಿ-12 ಕ್ಕೆ ಪೂರಕವಾಗಿ ನಾನು ನನ್ನ ಸುಳ್ಳು ಪ್ರಮಾಣಪತ್ರ ವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ

( ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.